ಮಂತ್ರಿಮಂಡಲದ ಎಲ್ಲಾ ಸಚಿವರುಗಳ ದೂರವಾಣಿ ಬಿಲ್ಲುಗಳು.

1416ಎ - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವೆಂಬರ್ ತಿಂಗಳಿನಿಂದ ಇಂದಿನವರೆಗೆ ಮುಖ್ಯ ಮಂತ್ರಿಗಳೂ ಸೇರಿದಂತೆ ಮಂತ್ರಿ ಮಂಡಲದ ಎಲ್ಲ ಸಚಿವರುಗಳ ಮನೆ ಮತ್ತು ಕಛೇರಿಯಲ್ಲಿರುವ ದೂರವಾಣಿ ಕರೆಗಳನ್ನು ಮಾಡಿದ್ದಕ್ಕಾಗಿ ಬಂದಿರುವ ಬಿಲ್‌ನ ಮೊತ್ತವೆಷ್ಟು (ಮುಖ್ಯಮಂತ್ರಿಗಳೂ ಸೇರಿದಂತೆ ಎಲ್ಲ ಸಚಿವರುಗಳ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ನವೆಂಬರ್ 90 ರಿಂದ ಫೆಬ್ರವರಿ 91ರವರೆಗೆ ಮಂತ್ರಿಮಂಡಲದ ಎಲ್ಲ ಸಚಿವರುಗಳ ಕಛೇರಿ ಹಾಗೂ ನಿವಾಸಗಳ ದೂರವಾಣಿ ಬಿಲ್‌ನ ವಿವರ ಈ ಕೆಳಕಂಡಂತೆ ಇರುತ್ತದೆ.

ಕಛೇರಿ ದೂರವಾಣಿ ಬಿಲ್‌ಗಳು	8,32,995
ನಿವಾಸದ ದೂರವಾಣಿ ಬಿಲ್‌ಗಳು	7,69,888
ಒಟ್ಟು ರೂ.	16,02,883

(ಪಟ್ಟಿ ಲಗತ್ತಿಸಿದೆ)

(ರೂಪಾಯಿಗಳಲ್ಲಿ)

ಕ್ರ. ಸಂ.	*ಶ್ರೀಯುತರವರ ಹೆಸರು*	*ಕಛೇರಿ ಟೆಲಿಫೋನ್ ಖರ್ಚು*	*ಮನೆಯ ಟೆಲಿಫೋನ್*
1.	ಎಸ್. ಬಂಗಾರಪ್ಪ, ಮುಖ್ಯಮಂತ್ರಿಗಳು	2,37,680.00	1,37,692.00
2.	ಅಜೀಜ್‌ಸೇಠ್	7,854.00	48,420.00
3.	ಶ್ರೀಮತಿ ಕೆ.ಎಸ್. ನಾಗರತ್ನಮ್ಮ	39,328.00	5,043.00
4.	ಬಿ. ಬಸವಲಿಂಗಪ್ಪ	39,546.00	39,365.00
5.	ಕೆ.ಎಚ್. ಪಾಟೀಲ್	47,362.00	30,628.00
6.	ಎಂ. ವೀರಪ್ಪ ಮೊಯಿಲಿ	38,350.00	1,63,038.00
7.	ಧರ್ಮಸಿಂಗ್	38,589.00	330.00
8.	ಮಲ್ಲಿಕಾರ್ಜುನ ಎಂ. ಖರ್ಗೆ	27,608.00	36,494.00
9.	ಟಿ.ಎನ್. ನರಸಿಂಹಮೂರ್ತಿ	67,036.00	42,269.00
10.	ಬಿ. ಶಿವಣ್ಣ	30,433.00	91,319.00
11.	ಜಿ. ಪುಟ್ಟಸ್ವಾಮಿಗೌಡ	47,447.00	96,380.00
12.	ಕೆ.ಜೆ. ಜಾರ್ಜ್	22,602.00	21,409.00
13.	ಬಿ. ಶಿವಮೂರ್ತಿ	26,895-00	24,675.00

14.	ಎಂ.ಎಲ್. ಉಸ್ತಾದ್	13,380.00	—
15.	ಮಲ್ಲಿಕಾರ್ಜುನ ಪ್ರಸನ್ನ	54,221.00	—
16.	ವಿ. ಮುನಿಯಪ್ಪ	17,880.00	—
17.	ಎಸ್. ರಮೇಶ	19,433.00	17,634.00
18.	ನಜೀರ್ ಅಹ್ಮದ್	23,098.00	9,350.00
19.	ಎ.ಎಸ್. ನಾಡಗೌಡ	20,560.00	5,842.00
20.	ಈಟಿ ಶಂಭುನಾಥ	13,693.00	—
	ಒಟ್ಟು ರೂ.	8,32,995.00	7,69,888.00

ಉಪಪ್ರಧಾನ ಮಂತ್ರಿಗಳು ರಾಜ್ಯದಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ವೆಚ್ಚವಾದ ಹಣದ ಬಗ್ಗೆ

1415- ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವೆಂಬರ್ 1990ರಿಂದ ಇಲ್ಲಿಯವರೆವಿಗೆ ರಾಷ್ಟ್ರದ ಉಪ ಪ್ರಧಾನ ಮಂತ್ರಿಗಳು ರಾಜ್ಯಕ್ಕೆ ಎಷ್ಟು ಭಾರಿ ಭೇಟಿ ನೀಡಿದ್ದಾರೆ?

ಆ) ಇವರು ಭೇಟಿ ನೀಡಿದ ಸಂದರ್ಭದಲ್ಲಿ ಇವರ ರಕ್ಷಣಾ ಉಪಚಾರ ಮತ್ತು ಇತರೆ ಕಾರ್ಯಗಳಿಗೆ ರಾಜ್ಯ ಸರ್ಕಾರಕ್ಕೆ ಖರ್ಚಾದ ಹಣವೆಷ್ಟು? (ಪ್ರತಿಯೊಂದು ಭಾರಿ ಭೇಟಿ ನೀಡಿದಾಗಲೂ ಆಗಿರುವ ಖರ್ಚನ್ನು ಪ್ರತ್ಯೇಕವಾಗಿ ನೀಡುವುದು)

ಇ) ಉಪ ಪ್ರಧಾನಿಯವರ ಭೇಟಿಯ ಸಮಯದಲ್ಲಿ ವೆಚ್ಚವಾಗಿರುವ ಹಣವನ್ನು ಕೇಂದ್ರ ಸರ್ಕಾರವೇನಾದರೂ ಮರು ಪಾವತಿ ಮಾಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಎರಡು ಭಾರಿ

ಆ)

1. ಮೊದಲನೆಯ ಭೇಟಿ ಪ್ರತ್ಯೇಕ ಖರ್ಚು ಇಲ್ಲ. (ಇವರು ಪ್ರಧಾನ ಮಂತ್ರಿಯವರ ಸಂಗಡ ಬಂದಿದ್ದರು)
2. ಎರಡನೆಯ ಭೇಟಿ ರೂ. 1,68,867-56

ಇ) ಇಲ್ಲ.

ಮಂಗಳೂರು ತೈಲ ಶುದ್ಧೀಕರಣಗಾರ ಸ್ಥಾಪನೆ

1388 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತೈಲ ಶುದ್ಧೀಕರಣಗಾರ ಸ್ಥಾಪನೆ ಎಷ್ಟನೇ ಯೋಜನೆಯಲ್ಲಿ ಸ್ಥಾಪಿತವಾಗಲಿದೆ.

ಆ) ಇದಕ್ಕೆ ತಗಲುವ ಒಟ್ಟು ಖರ್ಚಿನ ಅಂದಾಜು ಎಷ್ಟು, ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಿದೆಯೇ